ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1102 (1269)
ಸದಸ್ಯರ ಹೆಸರು	:	ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಮೈಸೂರು ನಗರದ ವಿದ್ಯಾರಣ್ಯಪುರದ ಸೂಯೇಜ್ ಫಾರಂನಲ್ಲಿ ಈಗ ಸಂಗ್ರಹವಾಗಿರುವ ಕಸದ ರಾಶಿಯ ಅಂದಾಜು ಪ್ರಯಾಣವೆಷ್ಟು; ಈ ಕಸವನ್ನು ವಿಲೇವಾರಿ ಮಾಡಲು ಕೈಗೊಂಡಿರುವ ಕ್ರಮಗಳೇನು;	ಹಲವು ವರ್ಷಗಳಿಂದ ಶೇಖರಣೆಯಾಗಿರುವ ತ್ಯಾಜ್ಯದ ಪ್ರಮಾಣವು ಅಂದಾಜು 2ಲಕ್ಷ ಟನ್ ಗಳಾಗಿರುತ್ತದೆ. ಸದರಿ ಹಳೆಯ ತ್ಯಾಜ್ಯವನ್ನು (Legacy Waste) ಬಯೋರೆಮಿಡಿಯೇಷನ್ ಪದ್ಧತಿಯನ್ನು ಅನುಸರಿಸಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಲು ಮಹಾನಗರಪಾಲಿಕೆಯು ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಅಗತ್ಯ ಅನುದಾನವನ್ನು ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆಯಡಿ ಭರಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗುತ್ತಿದೆ.
ಆ)	ಮಹಾರಾಷ್ಟ್ರದ ನಾಗಪುರದಲ್ಲಿ ಕಸ ವಿಲೇವಾರಿ ಮಾಡಲು ಬಳಸುತ್ತಿರುವ ಬಯೋ ಮೈನಿಂಗ್ ತಂತ್ರಜ್ಞಾನದ ಮಾದರಿಯಲ್ಲಿಯೇ ಕಸ ವಿಲೇವಾರಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ; (ವಿವರಗಳನ್ನು ಒದಗಿಸುವುದು)	ಮಹಾರಾಷ್ಟ್ರದ ನಾಗಪುರ ನಗರವು Legacy Waste ನಿರ್ವಹಣೆಯಲ್ಲಿ ಉತ್ತಮ ಪದ್ಧತಿ ಅನುಸರಿಸುತ್ತಿರುವುದಾಗಿ ವರದಿಯಾದ ಹಿನ್ನಲೆಯಲ್ಲಿ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ತಂಡ ದಿನಾಂಕ; 30-12-2019 ರಂದು ನಾಗಪುರಕ್ಕೆ ಸ್ವಯಂಪ್ರೇರಿತ ಭೇಟಿ ನೀಡಿರುತ್ತಾರೆ. ತದನಂತರ ಪಾಲಿಕೆಯು ವೈಜ್ಞಾನಿಕವಾಗಿ Legacy Waste ವಿಲೇವಾರಿ ಮಾಡಲು ಅಂದಾಜು ಪಟ್ಟಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದು ಪರಿಶೀಲನೆಯಲ್ಲಿರುತ್ತದೆ.
ಇ)	ಜಿಗ್ಮಾ ಕಂಪನಿಯ ಆಧುನಿಕ ಕೊರಿಯನ್ ತಂತ್ರಜ್ಞಾನದ ಮೂಲಕ ಈ ಕಸವನ್ನು ವಿಲೇವಾರಿ ಮಾಡಲು ಸರ್ಕಾರ ಮುಂದೆ ಬಂದಿದೆಯೇ; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?	ಇಲ್ಲ, ಮಹಾನಗರಪಾಲಿಕೆಯು ಸಿದ್ಧಪಡಿಸಿರುವ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆದ ನಂತರ KTPP ನಿಯಮಗಳ ರೀತ್ಯಾ ಟೆಂಡರ್ ಕರೆದು ಅರ್ಹ ಏಜೆನ್ಸಿಯನ್ನು ಆಯ್ಕೆಮಾಡಿಕೊಂಡು Legacy Wasteನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತದೆ.

ನಅಇ 36 ಎಸಿಎಂ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು